**ಅರ್ಜಿಯ ಮೇರೆಗೆ ಸಾಕ್ಷಿಯನ್ನು ದಿಃ *26/06/2025* ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

***ಮುಂದುವರೆದ ಪಾಟೀ ಸವಾಲು ಃ ಶ್ರೀ ಜೆಬಿಪಿ ವಕೀಲರಿಂದ ವಾದಿ ಪರವಾಗಿ.***

ನಿ.ಡಿ.11 ರಂತೆ ಇರುವ ದಾಖಲೆಯನ್ನು ನಾನು ಓದಿ ತಿಳಿದುಕೊಂಡು ಹಾಜರುಪಡಿಸಿರುತ್ತೇನೆ ಎಂದರೆ ನಿಜ. ಸದರಿ ದಾಖಲೆ ಹದ್ದು ಬಂದೋಬಸ್ತ ಕುರಿತು ಇದೆ ಎಂದರೆ ನನಗೆ ಅಷ್ಟು ಗೊತ್ತಾಗುವುದಿಲ್ಲ. ನಿ.ಡಿ.11 ರಂತೆ ಇರುವ ದಾಖಲೆಯನ್ನು ಇಲ್ಲಿಯವರೆಗೂ ಪ್ರಶ್ನಿಸಿದ್ದಿರಾ ಎಂಬ ಪ್ರಶ್ನೆಗೆ ಸಾಕ್ಷಿದಾರರು ಅದು ನನ್ನ ಪತಿಗೆ ಗೊತ್ತು ಎಂದು ಉತ್ತರಿಸುತ್ತಾರೆ.

ನಾವು ಎರಡುವರೆ ಗುಂಟೆ ಆಸ್ತಿಯಲ್ಲಿ ಶೆಡ್ ಹಾಕಿರುತ್ತೇವೆ. ಯಾವ ಆಸ್ತಿಯಲ್ಲಿ ಈ ರೀತಿ ಶೆಡ್ ಕಟ್ಟಿದ್ದಿರಿ ಎಂಬ ಪ್ರಶ್ನೆಗೆ ಸಾಕ್ಷಿದಾರರು ದಾಖಲಾತಿಗಳು ಇರುತ್ತವೆ ಎಂದು ಉತ್ತರಿಸುತ್ತಾರೆ. ವಾದಿ ಜಾಗೆಯಲ್ಲಿ ಶೆಡ್‌ನ್ನು ಮಹಾನಗರ ಪಾಲಿಕೆಯ ಪರವಾನಿಗೆ ಇಲ್ಲದೆ ಕಟ್ಟಿದ್ದೇವೆ ಎಂಬ ಪ್ರಶ್ನೆಗೆ ಸಾಕ್ಷಿದಾರರು ಅದನ್ನು ಕಟ್ಟಿ 20 ವರ್ಷಗಳು ಆಗಿವೆ ಎಂದು ಉತ್ತರಿಸುತ್ತಾರೆ. ಈ ರೀತಿ ಸುಳ್ಳು ಹೇಳಿಕೆ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

***ಮರು ವಿಚಾರಣೆ ಃ ಇಲ್ಲ.***

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

1 ನೇ ಹೆ ಹಿ ದಿ ನ್ಯಾ ಹಾಗೂ ಸಿಜೆಎಂ,

ಧಾರವಾಡ.